ಸಿ.ಸಿ.1463/2024 ಪಿಡಬ್ಲ್ಯೂ-1

ದಿನಾಂಕಃ 28.03.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಎಂ.ಆರ್. ವಕೀಲರಿಂದಃ

ಆರೋಪಿಯು ಅಡಿಕೆ ವ್ಯಾಪಾರ ಮಾಡುತ್ತಾರೆ ಎಂದರೆ ಸರಿ. ಆ ವ್ಯಾಪಾರದಿಂದ ಆರೋಪಿಗೆ ವಾರ್ಷಿಕವಾಗಿ ರೂ.10 ಲಕ್ಷ ಆದಾಯ ಇದೆ ಎಂದರೆ ನನಗೆ ಗೊತ್ತಿಲ್ಲ. ನಾನು ವ್ಯವಸಾಯ ಮಾಡುತ್ತೇನೆ. ನನಗೆ ನಂದೀಪುರ ಗ್ರಾಮದ ಸ.ನಂ.24 ರಲ್ಲಿ 5 ಎಕರೆ ಜಮೀನು ಇದ್ದು, ಆ ಪೈಕಿ ಮುಕ್ಕಾಲು ಎಕರೆ ಹಿಡುವಳಿ ಜಮೀನು ಇದ್ದು ಉಳಿದದ್ದು ಅನಧೀಕೃತ ಸ್ವಾಧೀನದಲ್ಲಿ ಇದ್ದೇನೆ. ನಾನು ಅನಧೀಕೃತ ಸ್ವಾಧೀನದಲ್ಲಿರುವ ಜಮೀನಿನ ಸ.ನಂ.42 ಆಗಿದೆ. ನನ್ನ ಜಮೀನಿನಲ್ಲಿ ಕಾಫೀ ಮತ್ತು ಮೆಣಸು ಬೆಳೆ ಬೆಳೆದಿದ್ದೇನೆ. ನನ್ನ ಜಮೀನಿನ ಸಂಬಂಧ ದಾಖಲೆಯನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ನನ್ನ ಅನಧೀಕೃತ ಸಾಗುವಳಿಯ ಸಕ್ರಮ ಕೋರಿ ಅರ್ಜಿ ಸಲ್ಲಿಸಿದ್ದೇನೆ. ಈ ಸಂಬಂಧ ದಾಖಲೆಯನ್ನು ಹಾಜರುಪಡಿಸುತ್ತೇನೆ. ನನಗೆ ಇರುವ ಹಿಡುವಳಿ ಜಮೀನಿನ ಮೇಲೆ ನಾನು ಸಾಲ ಪಡೆದಿಲ್ಲ. ಕೃಷಿಯಿಂದ ನನಗೆ ವಾರ್ಷಿಕವಾಗಿ ರೂ.10 ರಿಂದ 12 ಲಕ್ಷ ಆದಾಯ ಇದೆ.

2023 ರ ಫೆಬ್ರವರಿ ಮೊದಲನೇ ವಾರದಲ್ಲಿ ನಾನು ಆರೋಪಿಗೆ ರೂ.1,20,000/- ಹಣ ಕೊಟ್ಟಿದ್ದೇನೆ. ಹಣ ಕೊಟ್ಟ ದಿನಾಂಕವನ್ನು ದೂರು ಮತ್ತು ನೋಟೀಸಿನಲ್ಲಿ ನಮೂದಿಸಿಲ್ಲ. ಆರೋಪಿ ತನ್ನ ಸಣ್ಣ ವಯಸ್ಸಿನಿಂದ ಪರಿಚಯ. ಆರೋಪಿಯು ನನ್ನ ದೂರದ ಸಂಬಂಧಿಯಾಗಬೇಕು. ನಾನು ಮತ್ತು ಆರೋಪಿ ಪರಸ್ಪರ ಒಬ್ಬರಿಗೊಬ್ಬರ ಮನೆಗೆ ಸಮಾರಂಭಗಳಲ್ಲಿ ಮಾತ್ರ ಹೋಗಿ ಬರುತ್ತೇವೆ. ನಾನು ಆರೋಪಿಯ ಮನೆಗೆ ಎಂದಿಗೂ ಹೋಗಿಲ್ಲ. ನನ್ನ ಮಕ್ಕಳ ಮದುವೆ ಸಮಾರಂಭಕ್ಕೆ ಆರೋಪಿ ನನ್ನ ಮನೆಗೆ ಬಂದಿದ್ದರು. 2016 ರಲ್ಲಿ ಆರೋಪಿ ನನ್ನ ಮಗಳ ಮದುವೆಗೆ ಬಂದಿದ್ದರು, ಆದರೆ 2023 ರಲ್ಲಿ ಆದ ನನ್ನ ಮಗನ ಮದುವೆಗೆ ಬಂದಿರಲಿಲ್ಲ. 2016 ರಲ್ಲಿ ನನ್ನ ಮಗಳ ಮದುವೆಗೆ ಸುಮಾರು ರೂ.5 ಲಕ್ಷ ಹಣ ಖರ್ಚು ಮಾಡಿದ್ದೆ. ನನ್ನ ಮಗನ ಮದುವೆಯ ಖರ್ಚನ್ನು ಅವರೇ ಬರಿಸಿದ್ದಾರೆ. ನನ್ನ ಮಗಳ ಮದುವೆ ಮಾಡಲು ನಾನು ಸಾಲ ಪಡೆದಿಲ್ಲ.

ಆರೋಪಿ ನನಗೆ ದೂರವಾಣಿ ಮೂಲಕ ಹಣ ಕೇಳಿದ್ದರು. ಆ ರೀತಿ ಹಣ ಕೇಳಿದ ದಿನಾಂಕ ನನಗೆ ಗೊತ್ತಿಲ್ಲ. ರೂ.1,20,000/- ವ್ಯವಹಾರಕ್ಕೂ ಮೊದಲು ಆರೋಪಿ ತನ್ನಿಂದ ರೂ.10 ರಿಂದ 15 ಸಾವಿರ ಹಣವನ್ನು ಪಡೆದು ವಾಪಸ್ಸು ಕೊಟ್ಟಿದ್ದರು. ಆ ರೀತಿ ಆರೋಪಿಯು ನನ್ನಿಂದ ಎರಡು ಬಾರಿ ಹಣ ಪಡೆದಿದ್ದಾರೆ. ಆ ರೀತಿ ರೂ.10 ರಿಂದ 15 ಸಾವಿರ ಹಣ ಪಡೆದ ಸಂದರ್ಭದಲ್ಲಿ ಆರೋಪಿ ನನಗೆ ಚೆಕ್ ಕೊಟ್ಟಿರಲಿಲ್ಲ. ಆ ಹಣವನ್ನು ಆರೋಪಿಯು ನಗದಾಗಿ ವಾಪಸ್ಸು ಕೊಟ್ಟಿದ್ದಾರೆ. ಆರೋಪಿ ನನ್ನಿಂದ ರೂ.10 ರಿಂದ 15 ಸಾವಿರ ಹಣ ಪಡೆದುಕೊಂಡಿದ್ದ ಸಮಯಕ್ಕೆ ಬದ್ರತೆಗೆಂದು ನಾನು ನಿಪಿ-1 ರ ಚೆಕ್ ನ್ನು ಪಡೆದಿದ್ದೆ ಎಂದರೆ ಸರಿಯಲ್ಲ. ಆರೋಪಿ ನನಗೆ ಹಣ ಮರುಪಾವತಿ ಮಾಡಿದ್ದರು ಸಹಾ ನಾನು ಚೆಕ್ ನ್ನು ವಾಪಸ್ಸು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯ ಸಂಬಂಧಿಯಾದ ಕಾರಣ ನಾನು ಚೆಕ್ ನ್ನು ವಾಪಸ್ಸು ಕೊಡುತ್ತೇನೆ ಎಂಬ ನಂಬಿಕೆಯಲ್ಲಿ ಆರೋಪಿ ಇದ್ದರು ಎಂದರೆ ಸರಿಯಲ್ಲ.

ಆರೋಪಿಯಿಂದ ಅಕ್ರಮ ಲಾಭ ಗಳಿಸುವ ಉದ್ದೇಶದಿಂದ ನಿಪಿ-1 ರ ಚೆಕ್ ನ್ನು ಬ್ಯಾಂಕ್ ಗೆ ಸಲ್ಲಿಸಿ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ರೂ.500/- ಮುಖಬೆಲೆಯ ನೋಟುಗಳಂತೆ ಒಟ್ಟು 240 ನೋಟುಗಳನ್ನು ಆರೋಪಿಗೆ ಕೊಟ್ಟಿದ್ದೆ. ನಾನು ಬೆಳೆದಿದ್ದ ಶುಂಠಿ ಮಾರಾಟದಿಂದ ನನಗೆ ರೂ.3,27,000/- ಹಣ ಬಂದಿದ್ದು ಆ ಪೈಕಿ ನಗದು ಹಣ ಇಟ್ಟು ಕೊಟ್ಟಿದ್ದೆ. ಒಂದು ಮೂಟೆ ಶುಂಠಿಗೆ ರೂ.3,000/- ಬೆಲೆ ಇತ್ತು. ಕಬ್ಬಿಣ ಸೇತುವೆ ಎಂಬ ಊರಿನಲ್ಲಿ ಜಮೀನು ಲೀಜ್ ಗೆ ಪಡೆದು ಅಲ್ಲಿ ಶುಂಠಿ ಬೆಳೆಯುತ್ತಿದ್ದೇನೆ. ಆ ಲೀಜ್ ಗೆ ಸಂಬಂಧಪಟ್ಟಂತೆ ಕರಾರು ಬರೆಸಿಲ್ಲ. ಆ ಜಮೀನಿನ ಮಾಲೀಕರನ್ನು ಈ ಪ್ರಕರಣದಲ್ಲಿ ಸಾಕ್ಷಿಯನ್ನಾಗಿ ಕರೆಸಲು ಆಗುವುದಿಲ್ಲ. ಬೇಲೂರಿನ ವ್ಯಾಪಾರಿಗೆ ಜನವರಿ 2023 ರಲ್ಲಿ ಶುಂಠಿ ಮಾರಾಟ ಮಾಡಿದ್ದೆ. ವ್ಯಾಪಾರದ ಹಣವನ್ನು ನಗದಾಗಿಯೇ ನನಗೆ ಕೊಟ್ಟಿದ್ದರು. ಶುಂಠಿ ವ್ಯಾಪಾರ ಮುಗಿದಿರುವ ಕಾರಣ ನನ್ನಿಂದ ಶುಂಠಿ ಖರೀದಿಸಿದವರನ್ನು ಈ ಪ್ರಕರಣಕ್ಕೆ ಸಾಕ್ಷಿಯನ್ನಾಗಿ ಕರೆಸಲು ಆಗುವುದಿಲ್ಲ. ನಾನು ಹೇಳಿದಂತೆ ಶುಂಠಿ ಬೆಳೆ ಬೆಳೆದಿಲ್ಲ ಅದನ್ನು ವ್ಯಾಪಾರ ಮಾಡಿಲ್ಲ ಎಂದರೆ ಸರಿಯಲ್ಲ.

2023 ರ ಫೆಬ್ರವರಿ ಮೊದಲನೇ ವಾರದಲ್ಲಿ ಆರೋಪಿ ನನಗೆ ಚೆಕ್ ನ್ನು ಕೊಟ್ಟಿದ್ದು ನಿಖರವಾದ ದಿನಾಂಕ ನನಗೆ ಗೊತ್ತಿಲ್ಲ. ಚೆಕ್ ನ್ನು ಮೊದಲೇ ಬರೆದುಕೊಂಡು ಬಂದಿದ್ದರು. 5 ತಿಂಗಳಲ್ಲಿ ಹಣ ವಾಪಸ್ಸು ಕೊಡುತ್ತೇನೆ ಎಂದು ಆರೋಪಿ ನನಗೆ ಚೆಕ್ ಕೊಟ್ಟಿದ್ದರು. ನಿಪಿ-1 ರಲ್ಲಿ ಇರುವ ಸಹಿ ಮತ್ತು ಬರವಣಿಗೆಗಳ ಶಾಹಿಯಲ್ಲಿ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ದಿ.03.07.2023 ಎಂದು ಚೆಕ್ ನಲ್ಲಿ ದಿನಾಂಕ ನಮೂದಿಸಲಾಗಿತ್ತು. ಆರೋಪಿಗೆ ನೋಟೀಸು ಕೊಟ್ಟ ದಿನಾಂಕವನ್ನು ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. SBI ಮತ್ತು SBM ಬೇರೆ ಬೇರೆ ಬ್ಯಾಂಕ್ ಗಳು ಎಂದರೆ ಸರಿ. ನಿಪಿ-1 ನ್ನು ಕನ್ನಾಪುರ ಶಾಖೆಯ SBI ಬ್ಯಾಂಕ್ ನ ನನ್ನ ಖಾತೆಗೆ ಹಾಜರುಪಡಿಸಿದ್ದೆ. ನಾನು ಆರೋಪಿಗೆ ನೋಟೀಸು ಕಳುಹಿಸಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಆರೋಪಿ ನನ್ನಿಂದ ರೂ.1,20,000/- ಪಡೆದಿಲ್ಲ ಎಂದರೆ ಸರಿಯಲ್ಲ. ನನ್ನ ಬಳಿ ನಗದು ಹಣ ಇದ್ದ ಕಾರಣ ಆರೋಪಿಗೆ ಚೆಕ್ ಮೂಲಕ ಹಣ ಕೊಟ್ಟಿಲ್ಲ.

ನನ್ನ ಬಳಿ ಯಾವುದೇ ನಗದು ಹಣ ಇರಲಿಲ್ಲ ಹಾಗೂ ನಾನು ಆರೋಪಿಗೆ ಯಾವುದೇ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ಬ್ಯಾಂಕ್ ಖಾತೆಯಲ್ಲಿ ವಾರ್ಷಿಕವಾಗಿ ರೂ.8 ರಿಂದ 10 ಲಕ್ಷ ಮೊತ್ತದ ವ್ಯವಹಾರ ಮಾಡುತ್ತೇನೆ. 2023 ನೇ ಸಾಲಿನಲ್ಲಿ ನನ್ನ ಬ್ಯಾಂಕ್ ಖಾತೆಯಲ್ಲಿ ಎಷ್ಟು ಹಣ ಇತ್ತು ಎಂದು ನನಗೆ ಗೊತ್ತಿಲ್ಲ. ನನ್ನ ಬ್ಯಾಂಕ್ ಅಕೌಂಟ್ ಸ್ಟೇಟ್ ಮೆಂಟ್ ನ್ನು ಹಾಜರುಪಡಿಸಲು ಕಷ್ಟವಾಗುತ್ತದೆ. ರೂ.1,20,000/- ಹಣ ಸಾಲವಾಗಿ ಕೊಡುವ ಆರ್ಥಿಕ ಸಾಮರ್ಥ್ಯ ನನಗಿಲ್ಲದೇ ಇರುವ ಕಾರಣ ಬ್ಯಾಂಕ್ ಸ್ಟೇಟ್ ಮೆಂಟ್ ಹಾಜರುಪಡಿಸಲು ತೊಂದರೆಯಾಗುತ್ತದೆ ಎಂದು ನುಡಿಯುತ್ತಿದ್ದೀರ ಎಂದರೆ ಸರಿಯಲ್ಲ. ಆರೋಪಿ ನನಗೆ ಯಾವುದೇ ಹಣ ಕೊಡಲು ಭಾದ್ಯಸ್ತನಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.